ಈ ದಿನ ದಿನಾಂಕಃ 17.07.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

ದಾವಾ ಆಸ್ತಿಯ ಬಗ್ಗೆ ಏನೆಂದು ಬರೆಸಿ ವಾದಿಗಳು ಹಾಕಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ. 1978 ನೇ ಇಸವಿಯಲ್ಲಿ ದಾವಾ ಆಸ್ತಿಯು ಖಾಲಿ ಜಾಗ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯ ತಂದೆ ದಾಸರ ಸಿದ್ದಪ್ಪನವರು ನೊಂದಾಯಿತ ಕ್ರಯಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಸಮಯದಲ್ಲಿ ದಾವಾ ಆಸ್ತಿಯ ಖಾನೆ ಷುಮಾರಿ ಸಂ. 32/ಬಿ ಎಂದು ಇತ್ತು ಈಗ ಆಸ್ತಿ ಸಂ. 150 ಎಂದು ಆಗಿದೆ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂದಿಯು ದಾವೆಯಲ್ಲಿ ನಮೂದಿಸಿರುವ ರೀತಿಯೇ ಇದೆ ಎಂದರೆ ಸರಿ. ದಾವಾ ಆಸ್ತಿಯ ಖಾನೆ ಷುಮಾರಿ ಸಂ. 32/ಬಿ ಹೊಸ ಸಂ. 150 ರ ಸ್ವತ್ತಿಗೆ ವಾದಿಯ ಕುಟುಂಬಸ್ಥರೇ ಹಕ್ಕುದಾರರು ಮತ್ತು ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಷೆಡ್ಯೂಲ್ ನಲ್ಲಿ ತೋರೀಸಿರುವ ವಿಸ್ತೀರ್ಣದ ಸ್ವತ್ತಿಗೆ ನಮಗೆ ಯಾವುದೇ ರೀತಿಯಾದಂತಹ ಹಕ್ಕು ಬಾಧ್ಯತೆ ಇರುವುದಿಲ್ಲ ಎಂದರೆ ಸರಿ.

2. ದಾವಾ ಆಸ್ತಿಯ ಉತ್ತರಭಾಗಕ್ಕೆ ನಮ್ಮ ಆಸ್ತಿ ಇದೆ ಎಂದರೆ ಸರಿ. ನಮ್ಮ ಆಸ್ತಿಯಲ್ಲಿ ಹಳೇ ಹಂಚಿನ ಮನೆ ಇತ್ತು. ಸದರಿ ಹಳೇೇ ಹಂಚಿನ ಮನೆಯನ್ನು 2016 ನೇ ಇಸವಿಯಲ್ಲಿ ಒಡೆದು ಹಾಕಿರುತ್ತೇವೆ. ಹಳೇ ಮನೆಯನ್ನು ಒಡೆದು ಹೊಸ ಮನೆ ಕಟ್ಟಲು ತಳಪಾಯವನ್ನು ಹಾಕಲು 2017 ನೇ ಇಸವಿಯಲ್ಲಿ ಶುರು ಮಾಡಿದಾಗ ಗಲಾಟೆಯಾಗಿರುತ್ತದೆ. ತಳಪಾಯವನ್ನು ಹಾಕಿ ಮನೆ ಕಟ್ಟಲು ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ವಾದಿಗಳು ದಾವಾ ಆಸ್ತಿಯ ಉತ್ತರ ಭಾಗಕ್ಕೆ ತಮಗೆ 3 ½ ಖಾಲಿ ಜಾಗ ಇದೆ ಎಂದು ನಮಗೆ ತಕರಾರು ಮಾಡಿದ್ದರು ಎಂದರೆ ಸರಿ. ವಾದಿಗಳು ತಮ್ಮ 3 1/2ಅಡಿ ಜಾಗವನ್ನು ಬಿಟ್ಟು ತಳಪಾಯವನ್ನು ಹಾಕುವಂತೆ ಹೇಳಿದ್ದರು ಎಂದರೆ ಸರಿ. ವಾದಿಗಳು ಸದರಿ 3 ½ ಅಡಿ ಜಾಗದ ವಿಚಾರವಾಗಿ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ 3 ½ ಅಡಿ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಉಪ್ಪರ ರಂಗಪ್ಪನವರ ಜಾಗ, ಪಶ್ಚಿಮಕ್ಕೆ ರಸ್ತೆ,, ಉತ್ತರಕ್ಕೆ ನಮ್ಮ ಸ್ವತ್ತು ಮತ್ತು ದಕ್ಷಿಣಕ್ಕೆ ವಾದಿಗಳ ಮನೆ ಎಂದರೆ ಸರಿ. ಸದರಿ ಜಾಗದ ಖಾತೆ ಸಂಖ್ಯೆ ಹಳೇ ನಂ. 32/ಬಿ ಹೊಸ ನಂ. 150 ಎಂದರೆ ಸರಿ.

3. ನಮಗೆ 149 ರ ಆಸ್ತಿಯ ನಮ್ಮ ಅಜ್ಜರ ಕಾಲದಿಂದ ಬಂದಿದ್ದು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. 149 ರ ಆಸ್ತಿಯು ಪೂರ್ವ ಪಶ್ಚಿಮ 25 ½ ಅಡಿ, ಉತ್ತರ ದಕ್ಷಿಣಕ್ಕೆ 27 ಅಡಿ ಜಾಗ ಇರುತ್ತದೆ. ಸ್ವತ್ತಿನ ಸಂ. 149 ರ ಆಸ್ತಿಯು ಪೂರ್ವ ಪಶ್ಚಿಮ 25 ½ ಅಡಿ, ಉತ್ತರ ದಕ್ಷಿಣಕ್ಕೆ 27 ಅಡಿ ಇರುತ್ತದೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ. ಸಾಕ್ಷಿ ದಾಖಲೇಗಳನ್ನು ಪರಿಶೀಲಿಸಿ ನಮ್ಮ ಸ್ವತ್ತು 25 ½ ಅಡಿ x 27 ಅಡಿ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ಸ್ವತ್ತಿನ ಅಸೆಸ್ ಮೆಂಟ್ ದಾಖಲೆಯನ್ನು ನೋಡಿರುತ್ತೇನೆ. ನಮ್ಮ ಸ್ವತ್ತಿನ ಸಂ. 149 ರ ಅಸೆಸ್ ಮೆಂಟ್ ನಲ್ಲಿ ಪೂರ್ವ ಪಶ್ಚಿಮ 8.35 ಮೀ. ಉತ್ತರ ದಕ್ಷಿಣ 4.60 ಮೀ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ ಒಪ್ಪಿದ ಮೇರೆಗೆ **ನಿಪಿ 11** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಅಳತೆ ತಪ್ಪಾಗಿದೆ ಎಂದು ನುಡಿಯುತ್ತಾರೆ. ನಮ್ಮ 149 ರ ಸ್ವತ್ತಿನ ಸಂಬಂದ ನಿಪಿ 11 ನ್ನು ಹೊರತು ಪಡಿಸಿ ಬೇರೆ ದಾಖಲೆಗಳು ಇಲ್ಲ ಎಂದರೆ ಸರಿ. 4. ನಾವು ಉತ್ತರ ದಕ್ಷಿಣಕ್ಕೆ 24 ಅಡಿ ತಳಪಾಯವನ್ನು ಹಾಕಿರುತ್ತೇವೆ. ನಮ್ಮ ಆಸ್ತಿಯ ಉತ್ತರ ಭಾಗಕ್ಕೆ ಗ್ರಾಮ ಪಂಚಾಯಿತಿ ರಸ್ತೆ ಬರುತ್ತದೆ.

4. ನಮ್ಮ ಆಸ್ತಿಯನ್ನು ನಾವು ಯಾವತ್ತಿಗೂ ಅಳತೆ ಮಾಡಿಸಿರುವುದಿಲ್ಲ. ನಿಪಿ 11 ರಲ್ಲಿ ನಮೂದಿಸಿರುವ ಅಳತೆಗೆ ಅನುಸಾರವಾಗಿ ನಮ್ಮ ಆಸ್ತಿ ಇದೆ ಎಂದರೆ ಸರಿ. ನಮ್ಮ ಆಸ್ತಿಯು ಉತ್ತರ ದಕ್ಷಿಣಕ್ಕೆ 16.1 ಅಡಿ ಮಾತ್ರ ಇದೆ ಎಂದರೆ ಸರಿಯಲ್ಲ. ನಿಪಿ 11 ರಲ್ಲಿ ತೋರೀಸಿರುವ ಅಳತೆಗಿಂತ ಹೆಚ್ಚು ತಳಪಾಯನ್ನು ಹಾಕಿರುತ್ತೇವೆ ಎಂದರೆಸರಿ. ಸಾಕ್ಷಿ ಮುಂದುವರೆದು ವಿಸ್ತೀರ್ಣವು ದಾಖಲೆಯಲ್ಲಿ ತಪ್ಪಾಗಿದೆ ಎಂದು ನುಡಿಯುತ್ತಾರೆ. ವಾದಿಯು ಈ ಪ್ರಕರಣವನ್ನು ದಾಖಲು ಮಾಡಿದ ನಂತರ ನಮ್ಮ ಆಸ್ತಿಗೆ ಸಂಬಂದಿಸಿದ ದಾಖಲೆಗಳನ್ನು ಪಂಚಾಯಿತಿಯಲ್ಲಿ ನಾವು ನೊಡಿರುತ್ತೇವೆ ಎಂದರೆ ಸರಿ. ನಮ್ಮ ಸ್ವತ್ತಿನಲ್ಲಿ ಅಳತೆ ತಪ್ಪಾಗಿದೆ ಎಂದು ಯಾವುದಾದರೂ ತಿದ್ದುಪಡಿ ಮಾಡಲು ಅರ್ಜಿ ನೀಡಿದ್ದೀರಾ ಎಂದರೆ ನೀವು ಬರೆಸಿಕೊಂಡು ಬಂದಿರುವ ದಾಖಲೆಯಲ್ಲಿ ವಿಸ್ತೀರ್ಣ ತಪ್ಪಾಗಿದೆ ಪಂಚಾಯಿತಿಯಲ್ಲಿ ವಿಸ್ತೀರ್ಣ ಸರಿಯಾಗಿರುತ್ತದೆ. ನಾವು ಇಲ್ಲಿಯವರೆಗೂ ಸ್ವತ್ತಿನ ಸಂ. 149ರ ಅಸೆಸ್ ಮೆಂಟ್ ನಲ್ಲಿ ಅಳತೆ ತಪ್ಪಾಗಿದೆ ಎಂದು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.

5. 2004-05 ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿಯವರು ನಮ್ಮ ಊರಿನ ಎಲ್ಲಾ ಜನರ ಆಸ್ತಿಗಳನ್ನು ಅಳತೆ ಮಾಡಿ ಅವರುಗಳು ಸ್ವಾದೀನ ಇರುವಷ್ಟು ವಿಸ್ತೀರ್ಣಗಳನ್ನು ನಮೂದಿಸಿ ಅಸೆಸ್ ಮೆಂಟ್ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ 11 ರ ವಿಚಾರ ಈ ಪ್ರಕರಣ ದಾಖಲು ಮಾಡುವದಕ್ಕೂ ಮೊದಲಿನಿಂದಲೂ ಸಹ ಹಾಗೂ ಪ್ರಕರಣ ದಾಖಲಾದ ನಂತರವು ಸಹ ತಿಳಿದಿತ್ತು ಎಂದರೆ ಸರಿ. ನಮ್ಮ ಆಸ್ತಿಯ ವಿಸ್ತೀರ್ಣವು ಕಡಿಮೆ ಇರುವುದರಿಂದ ನಿಪಿ 11 ಮತ್ತು ಇತರೆ ನಮ್ಮ ಆಸ್ತಿಗೆ ಸಂಬಂದಿಸಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

6. ವಾದಿಯ ಆಸ್ತಿಯ ದಕ್ಷಿಣ ಭಾಗಕ್ಕೆ ದೊಡ್ಡ ಹನುಮಂತಪ್ಪನವರ ಎರಡು ಮನೆಗಳು ಇವೆ ಎಂದರೆ ಸರಿ. ಸದರಿ ಎರಡು ಮನೆಯ ಮುಂಬಾಗಿಲು ಉತ್ತರ ದಿಕ್ಕಿಗಾದಂತೆ ಇವೆ ಎಂದರೆ ಸರಿ. ದೊಡ್ಡ ಹನುಮಂತಪ್ಪನವರ ಮನೆ ಮತ್ತು ವಾದಿಯ ಮನೆ ನಡುವೆ 5 ಅಡಿ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ 5 ಅಡಿ ಜಾಗವನ್ನು ದೊಡ್ಡ ಹನುಮಂತಪ್ಪನವರ ಮನೆಯವರು ಉಪಯೋೀಗಿಸಿಕೊಂಡು ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಗೆ ಬರುತ್ತಾರೆ ಎಂದರೆ ಸರಿ. ಸದರಿ 5ಅಡಿ ಜಾಗವನ್ನು ದೊಡ್ಡ ಹನುಮಂತಪ್ಪನವರ ಕುಟುಂಬದವರು ನಾನು ಹುಟ್ಟುವುದಕ್ಕೂ ಮೊದಲಿನಿಂದಲೂ ಅನುಭವಿಸುತ್ತಾರೆ ಬರುತ್ತಿದ್ದಾರೆ. ಸದರಿ 5 ಅಡಿ ಜಾಗವು ದೊಡ್ಡ ಹನುಮಂತಪ್ಪನವರಿಗೆ ಸೇರುತ್ತದೆ ಎಂದರೆ ಸರಿಯಲ್ಲ, ವಾದಿಗಳಿಗೂ ಅರ್ಧ ಬಾಗ ಇರುತ್ತದೆ. ನನ್ನ ತಕರಾರು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದೊಡ್ಡ ಹನುಮಂತಪ್ಪ ಮತ್ತು ವಾದಿಗಳ ನಡುವೆ ಇರುವ 5ಅಡಿ ಜಾಗದ ಪೈಕಿ ವಾದಿಗಳಿಗೆ 3ಅಡಿ ಜಾಗ ಸೇರಿರುತ್ತದೆ ಎಂದು ಹೇಳಿ ಬರೆಸಿರುವುದಿಲ್ಲ.

7. ವಾದಿಗಳ ಮನೆಯು ಉತ್ತರ ದಕ್ಷಿಣಕ್ಕೆ 22 ಅಡಿ ಮನೆ ಇರುತ್ತದೆ ಎಂದರೆ ಸರಿಯಲ್ಲ, 25 ½ ಅಡಿ ಇರುತ್ತದೆ. ಗಲಾಟೆಯಾದ ಸಮಯದಲ್ಲಿ ನಾನು ವಾದಿಗಳ ಮನೆಯ ಅಳತೆಯನ್ನು ಮಾಡಿರುತ್ತೇನೆ. ವಾದಿಗಳು ತಮ್ಮ 25 ½ ಅಡಿ ಉತ್ತರ ದಕ್ಷಿಣ ದಿಕ್ಕಿನಲ್ಲಿರುವ ಸ್ವತ್ತಿನಲ್ಲಿ 22 ಅಡಿಗೆ ಮನೆನ್ನು ಕಟ್ಟಿಕೊಂಡು ಉತ್ತರ ದಿಕ್ಕಿಗಾದಂತೆ 3 ½ ಅಡಿ ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 3 ½ ಅಡಿ ಜಾಗದ ಉತ್ತರಕ್ಕೆ ನಮ್ಮ ಹಳೇ ಮನೆ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.



**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.